# Kristu Jayanti College

AUTONOMOUS | Bengaluru

Reaccredited with 'A' Grade by NAAC | Affiliated to Bangalore University

## DEPARTMENT OF KANNADA

## Report on Field Visit

**Date: 10-09-2016**

**Class: III BA/BSC/BCOM No. of students: 45**

Accompanied by **Lt. Sarvesh B S, Prof. Narayanaswamy M , Dr.Winnie Joyce A** Faculty members of the above college.**(Bus No: KA-01 AC,6751)**

## Place Visited:

### 1. **Kuppali (Birth Place of great Kannada Poet)**

ದಿನಾಂಕ: ೧೦-೦೯-೨೦೧೬ ರಂದು ಕುಪ್ಪಳ್ಳಿ ಶೈಕ್ಷಣಿಕ ಪ್ರವಾಸವನ್ನು ಕನ್ನಡ ವಿಭಾಗದಿಂದ ಹಮ್ಮಿಕೊಳ್ಳಲಾಯಿತು. ನಲವತ್ತೆದು ವಿದ್ಯಾರ್ಥಿಗಳು ಮತ್ತು ಮೂವರು ಶಿಕ್ಷಕರು ವಿದ್ಯಾರ್ಥಿಗಳ ಜೊತೆಗಿದ್ದರು.

ಉದ್ದೇಶ: ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಕುವೆಂಪುರವರ ಪರಿಚಯ ಮತ್ತು ಅವರ ಕಾವ್ಯ ಸೃಷ್ಠಿಗೆ ಪ್ರೇರಣೆಯಾದ ಮಲೆನಾಡ ಪರಿಸರವನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡುವುದು. ಕುಪ್ಪಳ್ಳಿ ಊರೆಂದರೆ ಊರಲ್ಲ. ಇದೊಂದೆ ಮನೆಯಿರುವ ಸ್ಥಳ. ಕೂಡು ಕುಟುಂಬದ ಮನೆಯಲ್ಲಿ ಜನಿಸಿದ ಕುವೆಂಪು ತಮ್ಮ ಉನ್ನತ ಶಿಕ್ಷಣ ಮುಗಿಸಿ, ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದು ಮೈಸೂರಿನಲ್ಲಿ. ಆದರೂ ಕುವೆಂಪುರವರಿಗೆ ತನ್ನ ಹುಟ್ಟೂರಿನ ರಮಣೀಯ ಪ್ರಕೃತಿ ಬಗ್ಗೆ ಅಪಾರವಾದ ಭಾವನಾತ್ಮಕ ಒಲವು. ಈ ಕಾರಣದಿಂದ ತಮ್ಮ ಕಾವ್ಯ ಕೃತಿಗಳಲ್ಲಿ ಪ್ರಕೃತಿಯ ಸೊಬಗು ಎಲ್ಲಲ್ಲೂ ಪಡಿಮೂಡಿ ಬರುತ್ತದೆ. ಇಂತಹ ಸ್ಥಳವನ್ನು ಈಗ ಸರ್ಕಾರ ತನ್ನ ಅಧಿನಕ್ಕೆ ಪಡೆದು ಅವರ ಮನೆ, ಅವರ ಕೈ ಬರಹ, ಕೃತಿ ಮತ್ತು ಪಾರಿತೋಷಕಗಳನ್ನು ಸಂಗ್ರಹಿಸಿ ಒಂದು ಸ್ಮಾರಕ ಕೇಂದ್ರನ್ನಾಗಿ ಮಾಡಿದೆ. ಇಂಥಹ ಸ್ಥಳಕ್ಕೆ ವರ್ಷಕ್ಕೆ ಲಕ್ಷಾಂತರ ಜನ ಭೇಟಿ ನೀಡುತ್ತಾರೆ. ನಮ್ಮ ವಿದ್ಯಾರ್ಥಿಗಳು ಮೇಲಿನ ಎಲ್ಲ ವಿಷಯಗಳ ಕುರಿತು ಮಾಹಿತಿ ಸಂಗ್ರಹ ಮಾಡಿದ್ದು ತುಂಬಾ ಪ್ರಯೋಜನವಾಯಿತೆAದು ಅವರೇ ತಮ್ಮ ಅಭಿಪ್ರಾಯದಲ್ಲಿ ತಿಳಿಸಿದ್ದಾರೆ.

**Outcome:** ವಿದ್ಯಾರ್ಥಿಗಳು ಕುವೆಂಪು ಪಡೆದ ಪ್ರಕೃತಿ ದರ್ಶನವನ್ನು ಅರ್ಥ ಮಾಡಿಕೊಂಡರು. ಪಾರ0ಪರಿಕ ಮನೆಯ ಶೈಲಿ ಮತ್ತು ದಿನನಿತ್ಯದ ವಸ್ತುಗಳ ನೇರ ಅನುಭವ ಪಡೆದರು. ವ್ಯಕ್ತಿ ಮತ್ತು ಪರಿಸರದ ನಡುವಿನ ಸಂಬಂಧ ಅರಿತರು.

**Feedback:** ವಿದ್ಯಾರ್ಥಿಗಳು ನಗರ ಮತ್ತು ಹಳ್ಳಿಗಿರುವ ವ್ಯತ್ಯಾಸ ಹೇಳಿದರು. ಕುವೆಂಪು ಬಗ್ಗೆ ಹೆಚ್ಚಿನ ಮಾಹಿತಿ ಪಡೆದವೆಂದರು. ಮೌನದ ಮಹತ್ವ ತಿಳಿದೆವೆಂದರು. ಪುಸ್ತಕ ವರ್ಣನೆಯ ನೇರ ಅನುಭವ ಪಡೆದೆವೆಂದರು. ಅವಕಾಶಕ್ಕಾಗಿ ಕಾಲೇಜು ಮತ್ತು ಕನ್ನಡ ವಿಭಾಗಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

Report prepared by HoD
**Prof. Narayanaswamy M** **Lt.Sarvesh B S**



**ಕುವೆಂಪುರವರ ಮನೆಯ ಮುಂಭಾಗ (In front of Poet Kuvempu home)**



ಕವಿಶೈಲ: ಕುವೆಂಪುರವರ ಸಮಾಧಿ ಬಳಿ (Kavishaila)